Q. No. 6. Discuss the Parliamentary control and Government control over Public Undertakings. Marks : 16

ಸಾರ್ವಜನಿಕ ಉದ್ದಿಮೆಗಳ ಮೇಲೆ ಸಂಸದೀಯ ನಿಯಂತ್ರಣ ಮತ್ತು ಸರ್ಕಾರದ ನಿಯಂತ್ರಣವನ್ನು ಚರ್ಚಿಸಿರಿ.

Q. No. 7. Explain the establishment, jurisdiction and powers of Lokpal under the Lokpal and Lokayukta Act. Marks : 16

ಲೋಕಪಾಲ್ ಮತ್ತು ಲೋಕಾಯುಕ್ತ ಅಧಿನಿಯಮದ ಅಡಿಯಲ್ಲಿ ಲೋಕಪಾಲನ ರಚನೆ, ವ್ಯಾಪ್ತಿ ಮತ್ತು ಅಧಿಕಾರಗಳನ್ನು ವಿವರಿಸಿರಿ.

Q. No. 8. Write short note on **any two** : Marks : 2x8=16

ಯಾವುದೇ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Administrative Discretion

ಆಡಳಿತಾತ್ಮಕ ವಿವೇಚನೆ

(b) Private law remedies

ಖಾಸಗಿ/ವೈಯಕ್ತಿಕ ಕಾನೂನು ಪರಿಹಾರಗಳು

(c) Separation of Powers.

ಅಧಿಕಾರಗಳ ಪ್ರತ್ಯೇಕೀಕರಣ.

Q. No. 9. Answer **any two** giving reasons : Marks : 2x10=20

ಬೇಕಾದ ಎರಡಕ್ಕೆ ಕಾರಣ ನೀಡಿ ಉತ್ತರಿಸಿರಿ :

(a) An army official did not obey the lawful command of its superior officer by not accepting the food offered to him. The court martial proceedings were initiated and the sentence of rigorous imprisonment of five years was imposed. He was also dismissed from service. The said order was challenged by him. Decide.

ಒಬ್ಬ ಸೇನೆಯ ಅಧಿಕಾರಿಯು ಅವನಿಗೆ ನೀಡಿದ ಆಹಾರವನ್ನು ಸ್ವೀಕರಿಸಿಲ್ಲ ಎಂಬ ಕಾರಣಕ್ಕಾಗಿ ಅವನ ವಿರುದ್ಧ ಹಿರಿಯ ಅಧಿಕಾರಿಯ ಕಾನೂನುಬದ್ಧ ಆದೇಶವನ್ನು ಪಾಲಿಸಿಲ್ಲದ ಕಾರಣಕ್ಕಾಗಿ ಒಂದು ಪ್ರಕರಣವನ್ನು ದಾಖಲಿಸುತ್ತಾರೆ. ಸೇನಾ ನ್ಯಾಯಾಲಯವು ವಿಚಾರಣೆ ನಡೆಸಿ ಅವನಿಗೆ ಐದು ವರ್ಷದ ಕಠಿಣ ಕಾರಾಗೃಹ ಶಿಕ್ಷೆಯನ್ನು ವಿಧಿಸಿ ಅವನನ್ನು ಸೇವೆಯಿಂದ ವಜಾಗೊಳಿಸುತ್ತದೆ. ಆತನು ಈ ತೀರ್ಪನ್ನು ಪ್ರಶ್ನಿಸುತ್ತಾನೆ. ನಿರ್ಧರಿಸಿರಿ.



(b) A student wrote his register number on every page of the answer book in a coded examination. Hence the Examination Authority cancelled his examination results without giving him notice. Is it valid ?

ಒಬ್ಬ ವಿದ್ಯಾರ್ಥಿಯು ಗೂಢಲೇಖ(ಕೋಡೆಡ್) ಪರೀಕ್ಷೆಯಲ್ಲಿ ತನ್ನ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಪ್ರತಿ ಪುಟದಲ್ಲಿ ಬರೆದಿದ್ದನು. ಆದ್ದರಿಂದ ಪರೀಕ್ಷಾ ಪ್ರಾಧಿಕಾರವು ಆತನಿಗೆ ನೋಟೀಸ್ ಕೊಡದೆ ಆತನ ಪರೀಕ್ಷೆಯ ಫಲಿತಾಂಶವನ್ನು ರದ್ದುಪಡಿಸಿತು. ಇದು ಸಿಂಧುವೆ ?

(c) Karunadu State Civil Service Rules provided for the payment of subsistence allowance of Rs. 10 per month during enquiry period to a suspended government servant. Is it valid ?

ವಿಚಾರಣಾ ಅವಧಿಯಲ್ಲಿ ತಾತ್ಕಾಲಿಕವಾಗಿ ವಜಾ ಮಾಡಲ್ಪಟ್ಟ ಸರಕಾರಿ ನೌಕರನ ಜೀವನಾಧಾರ ಭತ್ಯೆಯಾಗಿ ರೂ. 10 ನ್ನು ಪ್ರತಿ ತಿಂಗಳು ನೀಡಬೇಕೆಂದು ಕರುನಾಡು ರಾಜ್ಯ ನಾಗರೀಕ ಸೇವಾ ಅನುಬಂಧವು ತಿಳಿಸಿರುತ್ತದೆ. ಇದು ಕ್ರಮಬದ್ಧವೇ ?

**II Semester 3 Yr. LL.B./VI Semester 5 Yr. B.A. LL.B. (Maj.-Min.-System)/ VI Semester 5 Yr. B.A. LL.B./B.B.A. LL.B. Examination, June/July 2019**

# ADMINISTRATIVE LAW
**(Old and New Batch)**

Duration : 3 Hours | Max. Marks : 100

**Instructions** : 1. Answer Q. No. **9** and **any five** of the remaining questions.

2. Q. No. **9** carries **20** marks and the remaining questions carry **16** marks **each**.

3. Answers should be written **either** in **English** or **Kannada completely**.

Q. No. 1. Define Administrative Law. Explain the reasons for its growth. Marks : 16

ಆಡಳಿತ ಕಾನೂನನ್ನು ವ್ಯಾಖ್ಯಾನಿಸಿ. ಅದರ ಬೆಳವಣಿಗೆಯ ಕಾರಣಗಳನ್ನು ವಿವರಿಸಿರಿ.

Q. No. 2. Discuss judicial control over delegated legislation with the help of decided cases. Marks : 16

ಪ್ರತ್ಯಾಯೋಜಿತ ಶಾಸನ ರಚನೆಯ ಮೇಲಿನ ನಿಯಂತ್ರಣವನ್ನು ನಿರ್ಣಿತ ಪ್ರಕರಣಗಳೊಂದಿಗೆ ಚರ್ಚಿಸಿರಿ.

Q. No. 3. What are essentials of a government contract ? Explain the liability of government contracts with decided cases. Marks : 16

ಸರ್ಕಾರದ ಕರಾರಿನ ಅವಶ್ಯಕ ಲಕ್ಷಣಗಳೇನು ? ಸರ್ಕಾರದ ಕರಾರಿನಲ್ಲಿನ ಬಾಧ್ಯತೆಗಳನ್ನು ನಿರ್ಧಾರಿತ ಪ್ರಕರಣಗಳೊಂದಿಗೆ ವಿವರಿಸಿರಿ.

Q. No. 4. Explain different kinds of bias. Marks : 16

ಪಕ್ಷಪಾತದ ವಿವಿಧ ಪ್ರಕಾರಗಳನ್ನು ವಿವರಿಸಿರಿ.

Q. No. 5. What is writ of Habeas Corpus ? Explain the grounds for issue of the writ of Habeas Corpus. Marks : 16

ಬಂಧೀ ಪ್ರತ್ಯಕ್ಷೀಕರಣ ಪರಮಾದೇಶ ಎಂದರೇನು ? ಈ ಪರಮಾದೇಶ ಹೊರಡಿಸಲು ಬೇಕಾದ ಆಧಾರಗಳನ್ನು ವಿವರಿಸಿರಿ.

P.T.O.

## Third Semester 3 Year LL.B. Examination, December 2019
## ADMINISTRATIVE LAW
## (2018 and 2019 Batch)

Duration : 3 Hours | Max. Marks : 80

**Instructions** : 1. Answer **all five** Units.

2. One essay type question and short note/problem is **compulsory** from **each** Unit.

3. Figures to the **right** indicate marks.

4. Answer should be written either in **English** or **Kannada completely**.

UNIT – I

Q. No. 1. (a) Explain the reasons for the growth of administrative law. Marks : 10
ಆಡಳಿತ ಕಾನೂನಿನ ಬೆಳವಣಿಗೆಯ ಕಾರಣಗಳನ್ನು ವಿವರಿಸಿರಿ.

OR/ಅಥವಾ

Q. No. 1. (a) Explain the doctrine of "rule of law". Marks : 10
''ಕಾನೂನಿನ ಅಧಿಪತ್ಯ'' ತತ್ವವನ್ನು ವಿವರಿಸಿರಿ.

Q. No. 1. (b) Define administrative law. Marks : 6
ಆಡಳಿತ ಕಾನೂನನ್ನು ವ್ಯಾಖ್ಯಾನಿಸಿರಿ.

OR/ಅಥವಾ

Q. No. 1. (b) Explain "separation of powers". Marks : 6
''ಅಧಿಕಾರಗಳ ಪ್ರತ್ಯೇಕಿಕರಣ''ವನ್ನು ವಿವರಿಸಿರಿ.

UNIT – II

Q. No. 2. (a) Define delegated legislation and state the reasons for its growth. Marks : 10
ಪ್ರತ್ಯಾಯೋಜಿತ ಕಾನೂನನ್ನು ವ್ಯಾಖ್ಯಾನಿಸಿರಿ ಮತ್ತು ಅದರ ಬೆಳವಣಿಗೆಯ ಕಾರಣಗಳನ್ನು ಹೇಳಿರಿ.

OR/ಅಥವಾ

Q. No. 2. (a) Explain judicial control of delegated legislation. Marks : 10
ಪ್ರತ್ಯಾಯೋಜಿತ ಕಾನೂನಿನ ನ್ಯಾಯಿಕ ನಿಯಂತ್ರಣಗಳನ್ನು ವಿವರಿಸಿರಿ.

Q. No. 2. (b) What is conditional legislation ? Marks : 6
ಷರತ್ತುಬದ್ಧ ಕಾನೂನು ರಚನೆ ಎಂದರೇನು ?

OR/ಅಥವಾ

Q. No. 2. (b) State 'X' established special courts under a statute for the purpose of speedier trial. Some cases were transferred to the special courts from regular criminal courts. 'Yash' whose case has been so transferred challenges its legality. Will he succeed ? Marks : 6
'X' ರಾಜ್ಯವು ಒಂದು ಶಾಸನದಡಿ ವಿಶೇಷ ನ್ಯಾಯಾಲಯಗಳನ್ನು, ಅಪರಾಧಗಳ ತ್ವರಿತ ವಿಲೇವಾರಿಯ ಕಾರಣಕ್ಕಾಗಿ ಸ್ಥಾಪಿಸಿತು. ಸಾಮಾನ್ಯ ಅಪರಾಧಿಕ ನ್ಯಾಯಾಲಯಗಳಿಂದ ಕೆಲವು ಪ್ರಕರಣಗಳನ್ನು ಈ ನ್ಯಾಯಾಲಯಗಳಿಗೆ ವರ್ಗಾಯಿಸಿತು. "ಯೆಶ್" ಎಂಬುವವನ ಪ್ರಕರಣವೂ ಹೀಗೆ ವರ್ಗಾಯಿಸಲ್ಪಟ್ಟಿತು. ಅವನು ಈ ಕ್ರಮದ ಸಿಂಧುತ್ವವನ್ನು ಪ್ರಶ್ನಿಸುತ್ತಾನೆ. ಅವನು ಜಯಗಳಿಸುವನೇ ?

## UNIT – III

Q. No. 3. (a) Explain different kinds of bias. Marks : 10
ಪಕ್ಷಪಾತದ ವಿವಿಧ ಪ್ರಕಾರಗಳನ್ನು ವಿವರಿಸಿರಿ.

OR/ಅಥವಾ

Q. No. 3. (a) Explain the principle "audi alteram partem". Marks : 10
"ಪ್ರತಿಪಕ್ಷವನ್ನು ವಿಚಾರಿಸತಕ್ಕದ್ದು" ಎಂಬ ನಿಯಮವನ್ನು ವಿವರಿಸಿರಿ.

Q. No. 3. (b) A complaint was given by lady students that some boys students of their college entered the ladies hostel and misbehaved. The enquiry committee recorded the statements of the girls of the hostel in the absence of boys and expelled the boys from the college. Advice. Marks : 6
ಕಾಲೇಜಿನ ಕೆಲವು ವಿದ್ಯಾರ್ಥಿನಿಯರು ತಮ್ಮ ವಿದ್ಯಾರ್ಥಿನಿ ನಿಲಯಕ್ಕೆ ಕೆಲವು ವಿದ್ಯಾರ್ಥಿಗಳು ಪ್ರವೇಶಿಸಿ ಅಸಭ್ಯವಾಗಿ ವರ್ತಿಸಿದರು ಎಂದು ದೂರು ನೀಡಿದರು. ವಿಚಾರಣಾ ಸಮಿತಿಯವರು ವಿದ್ಯಾರ್ಥಿನಿಯರ ಹೇಳಿಕೆಗಳನ್ನು ಆ ಹುಡುಗರ ಅನುಪಸ್ಥಿತಿಯಲ್ಲಿ ದಾಖಲಿಸಿ, ಸದರಿ ಹುಡುಗರನ್ನು ಕಾಲೇಜಿನಿಂದ ತೆಗೆದು ಹಾಕಿದರು. ಸಲಹೆ ನೀಡಿರಿ.

OR/ಅಥವಾ

Q. No. 3. (b) A selection committee was constituted by the Central Government for promotions to higher posts to be selected from a list of senior officers. One of them who was also a member of the selection committee was promoted. An unsuccessful candidate challenges this. Will he succeed ? Marks : 6
ಹಿರಿಯ ಅಧಿಕಾರಿಗಳ ಒಂದು ಪಟ್ಟಿಯಿಂದ ಮೇಲಿನ ಹುದ್ದೆಗೆ ಬಡ್ತಿಮಾಡಿ ನೇಮಿಸುವುದಕ್ಕಾಗಿ ಕೇಂದ್ರ ಸರಕಾರವು ಒಂದು ಸಮಿತಿಯನು ರಚಿಸಿತು. ಅವರಲ್ಲಿ ಒಬ್ಬನಾದ ಹಾಗೂ ಆ ಸಮಿತಿಯ ಸದಸ್ಯನೂ ಆದವನೊಬ್ಬನನ್ನು ಆರಿಸಲಾಯಿತು. ಈ ಆಯ್ಕೆಯನ್ನು ಅನುತ್ತೀರ್ಣನಾದ ಒಬ್ಬನು ಪ್ರಶ್ನಿಸುತ್ತಾನೆ. ಅವನು ಜಯಗಳಿಸುವನೇ ?



## UNIT – IV

Q. No. 4. (a) What is Writ of Mandamus ? What should petitioner prove for grant of this Writ ? Marks : 10
'ಪರಮಾದೇಶ'ದ ಆಜ್ಞಾಪತ್ರ ಎಂದರೇನು ? ಈ ಆಜ್ಞಾಪತ್ರವನ್ನು ಪಡೆಯಲು ಅರ್ಜಿದಾರನು ಏನನ್ನು ಸಾಬೀತುಪಡಿಸಬೇಕು ?

OR/ಅಥವಾ

Q. No. 4. (a) State the extent of liability of the government in torts. Marks : 10
ಅಪಕೃತ್ಯಗಳಲ್ಲಿ ಸರಕಾರದ ಹೊಣೆಗಾರಿಕೆಯ ವ್ಯಾಪ್ತಿಯನ್ನು ಹೇಳಿರಿ.

Q. No. 4. (b) What is public interest litigation ? Marks : 6
ಸಾರ್ವಜನಿಕ ಹಿತಾಸಕ್ತಿ ದಾವೆ ಎಂದರೇನು ?

OR/ಅಥವಾ

Q. No. 4. (b) Write a note on "injunctions". Marks : 6
ನಿರ್ಬಂಧಕಾಜ್ಞೆಗಳ ಕುರಿತು ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) Explain Parliamentary control of public undertakings. Marks : 10
ಸಾರ್ವಜನಿಕ ಉದ್ದಿಮೆಗಳ ಸಂಸದೀಯ ನಿಯಂತ್ರಣಗಳನ್ನು ವಿವರಿಸಿರಿ.

OR/ಅಥವಾ

Q. No. 5. (a) Explain the efficacy of inquiry commissions and the impact of report of an inquiry commission. Marks : 10
ವಿಚಾರಣಾ ಆಯೋಗಗಳ ಸಾಮರ್ಥ್ಯ ಮತ್ತು ಅವುಗಳ ವರದಿಯ ಪ್ರಭಾವ/ಪರಿಣಾಮ ವಿವರಿಸಿರಿ.

Q. No. 5. (b) Write a note on Lokpal and Lokayukta. Marks : 6
ಲೋಕಪಾಲ ಹಾಗೂ ಲೋಕಾಯುಕ್ತ ಕುರಿತು ಟಿಪ್ಪಣಿ ಬರೆಯಿರಿ.

OR/ಅಥವಾ

Q. No. 5. (b) The Central Government appointed a commission to inquire into the conduct of Chief Minister of a state. Is the action of the Central Government valid ? Marks : 6
ಒಂದು ರಾಜ್ಯದ ಮುಖ್ಯಮಂತ್ರಿಯ ನಡವಳಿಕೆಯನ್ನು ವಿಚಾರಣೆ ಮಾಡಲು ಕೇಂದ್ರ ಸರಕಾರವು ಒಂದು ವಿಚಾರಣಾ ಆಯೋಗವನ್ನು ನೇಮಿಸಿತು. ಕೇಂದ್ರ ಸರಕಾರದ ಈ ಕ್ರಮವು ಸಿಂಧುವೇ ?

Q. No. 4. What are the stages of Fair Hearing ? Discuss the exceptions with relevant cases. Marks : 16

ನ್ಯಾಯಸಮ್ಮತ ಸುನಾವಣೆಯ ಹಂತಗಳಾವುವು ? ಈ ನಿಯಮಕ್ಕಿರುವ ಅಪವಾದಗಳನ್ನು ಸೂಕ್ತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 5. Explain the scope of Judicial Review of Administrative Discretion with decided cases. Marks : 16

ಆಡಳಿತಾತ್ಮಕ ವಿವೇಚನೆಯ ನ್ಯಾಯಿಕ ವಿಮರ್ಶೆಯ ವ್ಯಾಪ್ತಿಯನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 6. Discuss the role of writ of certiorari and writ of prohibition in administration. Marks : 16

ಆಡಳಿತದಲ್ಲಿ ಸರ್ಶಿಯೋರಾರಿ ಮತ್ತು ಪ್ರೊಹಿಬಿಷನ್ ರಿಟ್‌ನ ಮಹತ್ವ (ಪಾತ್ರ) ವನ್ನು ಚರ್ಚಿಸಿ.

Q. No. 7. With the help of leading cases describe the tortious liability of the State. Marks : 16

ನಿರ್ಧರಿತ ಪ್ರಮುಖ ಪ್ರಕರಣಗಳೊಂದಿಗೆ ಅಪಕೃತ್ಯಗಳಲ್ಲಿ ರಾಜ್ಯದ ಹೊಣೆಗಾರಿಕೆಯನ್ನು ವರ್ಣಿಸಿ.

Q. No. 8. Write short note on **any two** of the following : Marks : 2x8=16

ಈ ಕೆಳಗಿನ ಯಾವುದೇ **ಎರಡಕ್ಕೆ** ಟಿಪ್ಪಣಿ ಬರೆಯಿರಿ

(a) Ombudsman in India.
ಭಾರತದಲ್ಲಿ ಓಂಬಡ್ಸ್‌ಮನ್.

(b) Droit Administratiff
ಡ್ರಾಯಿಟ್ ಎಡ್ಮಿನಿಸ್ಟ್ರೇಟಿಫ್

(c) Role of Public Undertakings.
ಸಾರ್ವಜನಿಕ ಉದ್ದಿಮೆಗಳ ಪಾತ್ರ.

Q. No. 9. Solve **any two** of the following problems : Marks : 2x10=20

ಈ ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಬಗೆಹರಿಸಿ :

(a) The Central Government was empowered by the Mining Act to pass mining regulations in consultation with Mining Board. But the Government framed regulations without consulting the Board as the Mining Board was not yet constituted under the Act. The Mining Company affected by the regulations, challenged the same. Decide.



ಗಣಿ ಕಾಯ್ದೆಯಡಿ ಕೇಂದ್ರ ಸರಕಾರವು ಗಣಿ ನಿರ್ಬಂಧಗಳನ್ನು ಗಣಿ ಇಲಾಖೆಯನ್ನು ಚರ್ಚಿಸಿ ಜಾರಿ ಮಾಡುವ ಅಧಿಕಾರ ಹೊಂದಿತ್ತು. ಆದರೆ ಕೇಂದ್ರ ಸರಕಾರವು ಗಣಿ ಮಂಡಳಿಯನ್ನು ಗಣನೆಗೆ ತೆಗೆದುಕೊಳ್ಳದೇ ಗಣಿ ನಿಯಮಗಳನ್ನು ರಚಿಸಿತು. ಆದರೆ ಕಾಯ್ದೆಯಡಿ ಗಣಿ ಮಂಡಳಿಯು ಇನ್ನೂ ರಚನೆಯಾಗಿರಲಿಲ್ಲ, ಒಂದು ಗಣಿ ನಿಗಮವು ಈ ನಿಯಮಗಳಿಂದ ತೊಂದರೆಗೊಳಪಟ್ಟು ಕಾರಣ ಈ ಮೇಲಿನ ಅಂಶಗಳ ಆಧಾರದಲ್ಲಿ ನಿಯಮಗಳನ್ನು ಪ್ರಶ್ನಿಸಿತು. ನಿರ್ಧರಿಸಿ.

(b) The authorities of an institution withheld the annual incremental benefits to an employee on the basis of some adverse remarks in the confidential report of which he was not made aware. The employee questions the action. Decide.

ಒಂದು ಸಂಸ್ಥೆಯ ಅಧಿಕಾರಿಗಳು ತನ್ನ ಒಬ್ಬ ನೌಕರನ ವಾರ್ಷಿಕ ವೇತನ ಬಡ್ತಿಯನ್ನು ಗೌಪ್ಯ ವರದಿಯಲ್ಲಿ ನಮೂದಿಸಲಾದ ವ್ಯತಿರಿಕ್ತ ವರದಿಯನ್ನಾಧರಿಸಿ ತಡೆಹಿಡಿಯಿತು. ಗೌಪ್ಯ ವರದಿಯ ಈ ವ್ಯತಿರಿಕ್ತ ಮಾಹಿತಿಯು ನೌಕರನಿಗೆ ತಿಳಿದಿರಲಿಲ್ಲ, ಅಧಿಕಾರಿ ವರ್ಗದ ಈ ಕ್ರಮವನ್ನು ನೌಕರನು ಪ್ರಶ್ನಿಸಿದನು. ನಿರ್ಧರಿಸಿ.

(c) The Government had issued a notification notifying areas where slum clearance scheme will be introduced. Subsequently the notification was amended and certain areas notified in the original scheme was left out. Decide its validity.

ಸರಕಾರವು ಒಂದು ಅಧಿಸೂಚನೆಯನ್ನು ಹೊರಡಿಸಿ ಕೆಲವು ಪ್ರದೇಶಗಳನ್ನು ಕೊಳಚೆ ನಿರ್ಮೂಲನೆ ಯೋಜನೆಯಡಿ ಅಡಕ ಮಾಡಿಕೊಂಡು ಪ್ರಕಟಿಸಿತು. ತದನಂತರ ಈ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ಈ ಹಿಂದೆ ಯೋಜನೆಯ ವ್ಯಾಪ್ತಿಯೊಳಗೆ ಬಂದಂತಹ ಕೆಲವು ಪ್ರದೇಶಗಳನ್ನು ಮೂಲ ಯೋಜನೆಯ ವ್ಯಾಪ್ತಿಯಿಂದ ಹೊರಗಿಟ್ಟಿತ್ತು. ಅಧಿಸೂಚನೆಯ ತಿದ್ದುಪಡಿಯ ವಿಧಿಬದ್ಧತೆಯನ್ನು ನಿರ್ಧರಿಸಿ.

---

**Second Semester 3 Year LL.B./VI Semester 5 Year B.A. LL.B (Maj.-Min.System)/ B.A. LL.B./B.B.A. LL.B. Examination, November/December 2020**

# ADMINISTRATIVE LAW
**(Old and New)**

Duration : 3 Hours — Max. Marks : 100

**Instructions :**
1. **Answer Question No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answers should be written completely either in English or Kannada.**

ಸೂಚನೆಗಳು :
1. ಪ್ರಶ್ನೆ 9ಕ್ಕೆ ಮತ್ತು ಇನ್ನುಳಿದ 5 ಪ್ರಶ್ನೆಗಳಿಗೆ ಉತ್ತರಿಸಿರಿ.
2. ಪ್ರಶ್ನೆ 9ಕ್ಕೆ 20 ಅಂಕಗಳು ಮತ್ತು ಇನ್ನುಳಿದ ಪ್ರಶ್ನೆಗಳಿಗೆ ತಲಾ 16 ಅಂಕಗಳಿರುತ್ತವೆ.
3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಅಥವಾ ಕನ್ನಡ ಮಾಧ್ಯಮದಲ್ಲಿ ಬರೆಯಬೇಕು.

Q. No. 1. Critically examine the growth of Administrative law in India. Marks : 16

ಭಾರತದಲ್ಲಿ ಆಡಳಿತದ ಕಾನೂನಿನ ಬೆಳವಣಿಗೆಯನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿ.

Q. No. 2. Discuss the grounds of Judicial Control over delegated legislation with decided cases. Marks : 16

ಪ್ರತ್ಯಾಯೋಜಿತ ಶಾಸನದ ಮೇಲಿನ ನ್ಯಾಯಿಕ ನಿಯಂತ್ರಣದ ಆಧಾರಗಳನ್ನು ನಿರ್ಧಾರಿತ ಪ್ರಕರಣಗಳೊಂದಿಗೆ ಚರ್ಚಿಸಿರಿ.

Q. No. 3. 'Administrative Adjudication is the by-product of modern progressive state'– Explain. Marks : 16

'ಆಡಳಿತಾತ್ಮಕ ನ್ಯಾಯದಾನ ವ್ಯವಸ್ಥೆ'ಯು ಆಧುನಿಕ ಪ್ರಗತಿಪರ ರಾಷ್ಟ್ರದ ಒಂದು ಉಪ ಉತ್ಪನ್ನ' – ವಿವರಿಸಿ.

P.T.O.

Q. No. 6. Examine critically the scope of controls over public corporations. Marks : 16

ಸಾರ್ವಜನಿಕ ನಿಗಮಗಳ ಮೇಲಿನ ನಿಯಂತ್ರಣಗಳ ವ್ಯಾಪ್ತಿಯನ್ನು ಟೀಕಾತ್ಮಕವಾಗಿ ಪರೀಕ್ಷಿಸಿ.

Q. No. 7. Discuss the conditions for the issue of Mandamus and Quo-warranto. Marks : 16

ಮಾಂಡಮಸ್ ಮತ್ತು ಕೊವಾರಂಟೋ ರಿಟ್ ನೀಡಿಕೆಗಾಗಿ ಇರುವ ಮುಖ್ಯ ನಿಯಮಗಳನ್ನು (ಉಪಬಂಧ) ಚರ್ಚಿಸಿ.

Q. No. 8. Write short note on **any two** of the following : Marks : 2x8=16

ಈ ಕೆಳಗಿನ ಎರಡರಲ್ಲಿ ಲಘು ಟಿಪ್ಪಣಿ ಬರೆಯಿರಿ :

(a) Administrative discretion.

ಆಡಳಿತಾತ್ಮಕ ವಿವೇಚನೆ.

(b) Doctrine of legitimate expectation.

ಕಾನೂನುಬದ್ಧ ನಿರೀಕ್ಷೆ ತತ್ವ.

(c) Lokayukta in Karnataka.

ಕರ್ನಾಟಕದಲ್ಲಿ ಲೋಕಾಯುಕ್ತ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಎರಡು ಸಮಸ್ಯೆಗಳನ್ನು ಬಗೆಹರಿಸಿ :

(a) The Government of a State framed a regulation in order to avert the possibility of hoarding and thus ensuring the fair trade due to low production of vegetables. The regulation provided that some of the listed vegetables could be sold only through Hopcoms to consumers. The traders association challenged the regulation. Decide.

ತರಕಾರಿಗಳ ಉತ್ಪಾದನಾ ಕೊರತೆಯಿಂದಾಗಿ ಉಂಟಾಗಬಹುದಾದ ಅಕ್ರಮ ದಾಸ್ತಾನು ಮತ್ತು ಬೆಲೆ ಏರಿಕೆಯನ್ನು ತಡೆಯುವುದಕ್ಕಾಗಿ ರಾಜ್ಯ ಸರಕಾರವು ಒಂದು ನಿಯಮವನ್ನು ಜಾರಿಮಾಡಿತು. ಈ ನಿಯಮಾನುಸಾರ ಪಟ್ಟಿಮಾಡಿದ ತರಕಾರಿಗಳನ್ನು ಹೋಪ್‌ಕಾಮ್ಸ್ ಮೂಲಕವೇ ಗ್ರಾಹಕರಿಗೆ ಮಾರತಕ್ಕದ್ದು ಎಂಬುದಾಗಿರುತ್ತದೆ. ವ್ಯಾಪಾರಿಗಳ ಒಕ್ಕೂಟವು ಈ ನಿಯಮವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.



(b) A Municipality is authorised by the Municipal Act to acquire land for the widening the streets. In the exercise of these powers, the Municipality acquires land and sells it at a higher price to make up the deficit in the Municipal Budget. Is the action valid ? Decide.

ಮುನ್ಸಿಪಾಲಿಟಿ ಕಾಯ್ದೆಯು ಬೀದಿ ರಸ್ತೆಯ ಅಗಲೀಕರಣಕ್ಕಾಗಿ ಭೂಮಿ ಸ್ವಾಧೀನ ಪಡೆಯುವುದಕ್ಕಾಗಿ ಮುನ್ಸಿಪಾಲಿಟಿಗೆ ಅಧಿಕಾರ ನೀಡಿತ್ತು. ಮುನ್ಸಿಪಾಲಿಟಿಯು ಈ ಅಧಿಕಾರವನ್ನು ಪ್ರಯೋಗಿಸಿ ಭೂ ಸ್ವಾಧೀನ ಮಾಡಿ ತದನಂತರ ಮುನ್ಸಿಪಾಲಿಟಿ ಬಜೆಟ್ ಕೊರತೆನೀಗಿಸಲು ಸ್ವಾಧೀನ ಪಡಿಸಿದ ಭೂಮಿಯನ್ನು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡಿತು. ಈ ಕ್ರಮವು ವಿಧಿಬದ್ಧವೇ ? ನಿರ್ಧರಿಸಿ.

(c) A Police Officer while travelling in a public service vehicle lost his service revolver and office cash. He was supposed to travel in private transport as per the rules. For his serious dereliction he was suspended and on conclusion of enquiry, he was dismissed from the service. He challenged the action. Decide.

ಒಬ್ಬ ಪೋಲೀಸ್ ಅಧಿಕಾರಿಯು ಸಾರ್ವಜನಿಕ ವಾಹನದಲ್ಲಿ ಪ್ರಯಾಣ ಮಾಡುತ್ತಿರುವ ವೇಳೆಯಲ್ಲಿ ತಮ್ಮಲ್ಲಿದ್ದ ಸೇವಾ ರಿವೋಲ್ವರ್ ಮತ್ತು ಕಚೇರಿ ಹಣವನ್ನು ಕಳೆದುಕೊಂಡರು. ಸೇವಾ ನಿಯಮಾವಳಿ ಪ್ರಕಾರ ಅವರು ಖಾಸಗಿ ವಾಹನದಲ್ಲಿ ಪ್ರಯಾಣಿಸಬೇಕಿತ್ತು. ಈ ಗಂಭೀರ ಕರ್ತವ್ಯ ಲೋಪಕ್ಕಾಗಿ ಅವರನ್ನು ಸೇವೆಯಿಂದ ಅಮಾನತುಪಡಿಸಿ ಅವರ ವಿರುದ್ಧ ತನಿಖೆಯನ್ನು ನಡೆಸಿ ತನಿಖಾ ವೇಳೆಯಲ್ಲಿ ಕರ್ತವ್ಯ ಲೋಪವು ಗಂಭೀರವಾಗಿದೆ ಎಂಬುದು ಸಾಬೀತಾಗಿ ಅವರನ್ನು ಸೇವೆಯಿಂದ ವಜಾಗೊಳಿಸಲಾಯಿತು. ಪೋಲೀಸ್ ಅಧಿಕಾರಿಯು ಈ ಕ್ರಮವನ್ನು ಪ್ರಶ್ನಿಸುತ್ತಾರೆ ? ನಿರ್ಧರಿಸಿ.

0204/2049/0623

**II Semester 3 Yrs. LL.B./VI Semester 5 Yrs. B.A. LL.B. (Maj. Min. System)/ VI Semester 5 Yrs. B.A. LL.B./B.B.A. LL.B./B.Com. LL.B.**
**Examination, March/April 2021**
**ADMINISTRATIVE LAW**

Duration : 3 Hours Max. Marks : 100

**Instructions :** **1. Answer Q. No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. 'Administrative law has been characterised as the most outstanding development of the $20^{th}$ century'. Discuss with definitions of administrative law. Marks : 16

'ಆಡಳಿತದ ಕಾನೂನನ್ನು 20ನೇ ಶತಮಾನದ ಒಂದು ಮಹತ್ತರ ಬೆಳವಣಿಗೆ ಎಂದು ಬಣ್ಣಿಸಲಾಗಿದೆ'. ಆಡಳಿತದ ಕಾನೂನಿನ ವ್ಯಾಖ್ಯಾನಗಳೊಂದಿಗೆ ಚರ್ಚಿಸಿ.

Q. No. 2. "The doctrine of separation of powers has influenced and has itself been influenced by the growth of administrative law". Discuss. Marks : 16

ಅಧಿಕಾರ ವಿಂಗಡನಾ ಸಿದ್ಧಾಂತವು ಆಡಳಿತ ಕಾನೂನಿನ ಬೆಳವಣಿಗೆಯ ಪ್ರೇರೇಪಣೆ ಮತ್ತು ಬೆಳವಣಿಗೆಯಿಂದ ಪ್ರೇರೇಪಿಸಲ್ಪಟ್ಟಿದೆ. ಚರ್ಚಿಸಿ.

Q. No. 3. Explain the legislative control over administrative legislation with decided cases. Marks : 16

ಆಡಳಿತಾತ್ಮಕ ಶಾಸನದ ಮೇಲಿನ ಶಾಸನೀಯ ನಿಯಂತ್ರಣವನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 4. Examine the rule of fair hearing with judicial decisions. Marks : 16

ನ್ಯಾಯ ಸಮ್ಮತ ಸುನಾವಣೆ ನಿಯಮವನ್ನು ನ್ಯಾಯಿಕ ತೀರ್ಪುಗಳೊಂದಿಗೆ ಪರೀಕ್ಷಿಸಿ.

Q. No. 5. Explain the formalities required for the validity of Government Contracts. State the conditions for the Government liability. Marks : 16

ಸರ್ಕಾರದ ಕರಾರಿನ ವಿಧಿ ಬದ್ಧತೆಗೆ ಇರುವ ಮುಖ್ಯ ಅಂಶಗಳನ್ನು ವಿವರಿಸಿ. ಕರಾರಿನಲ್ಲಿ ಸರ್ಕಾರದ ಬಾಧ್ಯತೆಗಾಗಿ ಇರುವ ನಿಯಮಗಳನ್ನು ತಿಳಿಸಿ.

Q. No. 6. What are the grounds on which exercise of administrative discretion may be set aside ? Refer to decided cases. Marks : 16
ಯಾವ ಸಂದರ್ಭಗಳಲ್ಲಿ ಆಡಳಿತಾತ್ಮಕ ವಿವೇಚನಾ ಅಧಿಕಾರದ ಬಳಕೆಯನ್ನು ತಳ್ಳಿ ಹಾಕಬಹುದು ? ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 7. Is the growth of administrative law inconsistent with the doctrine of rule of law ? Elucidate. Marks : 16
ಆಡಳಿತದ ಕಾನೂನಿನ ಬೆಳವಣಿಗೆಯು ಕಾನೂನಿನ ಆಡಳಿತ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿದೆಯೋ ? ಸ್ಪಷ್ಟೀಕರಿಸಿ.

Q. No. 8. Explain the grounds for the issue of Writ of Certiorari. Marks : 16
ಸರ್ಟಿಯೋರಾರಿ ರಿಟ್‌ನ್ನು ಹೊರಡಿಸಲು ಇರುವ ಸಂದರ್ಭಗಳನ್ನು ವಿವರಿಸಿ.

Q. No. 9. Explain parliamentary control over delegated legislation. Marks : 16
ಪ್ರತ್ಯಾಯೋಜಿತ ಕಾನೂನಿನ ಮೇಲಿರುವ ಸಂಸದೀಯ ನಿಯಂತ್ರಣವನ್ನು ವಿವರಿಸಿರಿ.

Q. No. 10. Write short note on **any two** of the following : Marks : 2x8=16
ಈ ಕೆಳಗಿನ ಯಾವುದಾದರೂ ಎರಡರಲ್ಲಿ ಲಘು ಟಿಪ್ಪಣಿ ಬರೆಯಿರಿ :

(a) Central Vigilance Commission.
ಕೇಂದ್ರ ಜಾಗೃತ ಆಯೋಗ.

(b) Promissory estoppel.
ವಚನ ಪ್ರತಿಬಂಧ.

(c) Ombudsman in India.
ಭಾರತದಲ್ಲಿ ಓಂಬಡ್ಸ್‌ಮನ್.

Q. No. 11. Solve **any two** of the following problems : Marks : 2x10=20
ಈ ಕೆಳಗಿನ **ಎರಡು** ಸಮಸ್ಯೆಗಳನ್ನು ಬಗೆಹರಿಸಿ :

(a) A domestic enquiry was conducted against a workman 'X'. 'X' desired to be defended by a lawyer but this request was refused by the enquiry officer. 'X' contends that the refusal is a voilation of the principles of natural justice. Decide.
'X' ಎಂಬ ಕಾರ್ಮಿಕನ ವಿರುದ್ಧ ಆಂತರಿಕ ವಿಚಾರಣೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ 'X' ನು ವಿಚಾರಣಾಧಿಕಾರಿಗೆ ತಾನು ಒಬ್ಬ ವಕೀಲರಿಂದ ಈ ಪ್ರಕರಣದಲ್ಲಿ ಪ್ರತಿನಿಧಿಸುವ ಅವಕಾಶ ಕೊಡುವಂತೆ ಮನವಿ ಮಾಡಿದರು. ಆದರೆ ಈ ಮನವಿಯನ್ನು ತಿರಸ್ಕರಿಸಲಾಯಿತು. ವಿಚಾರಣಾಧಿಕಾರಿಯ ಈ ಕ್ರಮವು ನೈಸರ್ಗಿಕ ನ್ಯಾಯಾ ಸಿದ್ಧಾಂತದ ಉಲ್ಲಂಘನೆ ಎಂದು 'X' ಪ್ರಶ್ನಿಸಿದರು. ನಿರ್ಧರಿಸಿ.



(b) A writ petition is filed by a professor of law in the High Court against the Government of a State for the poor and negligent upkeep of a old age home in the state and consequent suffering of the inmates. The state contends that the petitioner has no locus standi to file the writ petition. Decide.
ಒಂದು ಕಾನೂನು ಪ್ರಾಧ್ಯಾಪಕರು ವೃದ್ಧಾಶ್ರಮಗಳ ನಿರ್ವಹಣೆಯಲ್ಲಿ ಕಳಪೆ ಗುಣಮಟ್ಟ ಮತ್ತು ನಿರ್ಲಕ್ಷದಿಂದಾಗಿ ಅಲ್ಲಿನ ವೃದ್ಧರುಗಳು ಬಳಲುತ್ತಿರುವುದನ್ನು ಕಂಡು ಸರ್ಕಾರದ ವಿರುದ್ಧ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸುತ್ತಾರೆ. ಆದರೆ ಅರ್ಜಿದಾರರಿಗೆ ಈ ರಿಟ್ ಅರ್ಜಿ ಸಲ್ಲಿಸಲು ಯಾವುದೇ ಲೋಕಸ್ ಸ್ಟಾಂಡೈ (ಹಕ್ಕು) ಇರುವುದಿಲ್ಲ ಎಂದು ವಾದಿಸಿತ್ತು. ನಿರ್ಧರಿಸಿ.

(c) State A has passed a legislation prohibiting medical professionals from practicing in the territory of the State without obtaining the license issued by the State Government. The Government is practice issued licenses to people who came from other States and settled in State A. Discuss the validity of the action of the state Government.
'A' ಎಂಬ ರಾಜ್ಯವು ಒಂದು ಶಾಸನವನ್ನು ಮಾಡಿ ಈ ರಾಜ್ಯದಲ್ಲಿ ಸರಕಾರದ ಅನುಮತಿ ಪತ್ರವಿಲ್ಲದೆ ವೃತ್ತಿಪರ ವೈದ್ಯರು ವೈದ್ಯಕೀಯ ವೃತ್ತಿ ನಡೆಸುವಂತಿಲ್ಲ ಎಂಬುದಾಗಿತ್ತು. ಆದರೆ ವಾಡಿಕೆಯಲ್ಲಿ ಈ ತನಕ ಹೊರರಾಜ್ಯಗಳ ವೃತ್ತಿ ವೈದ್ಯರು 'A' ರಾಜ್ಯಕ್ಕೆ ಬಂದು ಇಲ್ಲೇ ನೆಲೆಸಿದ್ದರೆ ಸರಕಾರವು ಅನುಮತಿ ಪತ್ರ ನೀಡುತಿತ್ತು. 'A' ರಾಜ್ಯದ ಶಾಸನವನ್ನು ವೃತ್ತಿಪರ ವೈದ್ಯರುಗಳು ಪ್ರಶ್ನಿಸುತ್ತಾರೆ. ಚರ್ಚಿಸಿರಿ.

---

**II Semester 3 Years LL.B./VI Semester 5 Year B.A. LL.B. (Maj.-Min. System)/ VI Semester 5 Year B.Com. LL.B./ VI Semester 5 Year B.A. LL.B./ B.B.A. LL.B. Examination, October/November 2021**

# ADMINISTRATIVE LAW

Duration : 3 Hours Max. Marks : 100

**Instructions :**
1. **Answer Q. No. 11 and any five of the remaining questions.**
2. **Q. No. 11 carries 20 marks and the remaining questions carry 16 marks each.**
3. **Answers should be written either in English or Kannada completely.**

Q. No. 1. Discuss the nature, scope and objectives of administrative law. Marks : 16
ಆಡಳಿತದ ಕಾನೂನಿನ ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶಗಳನ್ನು ಚರ್ಚಿಸಿ.

Q. No. 2. When the administrative authorities have to act judicially ? Explain with the help of decided cases. Marks : 16
ಭಾರತದಲ್ಲಿ ಆಡಳಿತಾತ್ಮಕ ಪ್ರಾಧಿಕಾರಗಳು ಯಾವಾಗ ನ್ಯಾಯಿಕವಾಗಿ ಕಾರ್ಯನಿರ್ವಹಿಸತಕ್ಕದ್ದು ? ತೀರ್ಮಾನಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 3. State the scope of doctrine of ultra-vires. Discuss the difference between substantive and procedural ultra-vires with decided cases. Marks : 16
ಅಧಿಕಾರಾತೀತ ಸಿದ್ಧಾಂತದ ವ್ಯಾಪ್ತಿಯನ್ನು ತಿಳಿಸಿ. ಮೂಲ ಅಧಿಕಾರಾತೀತ ಮತ್ತು ಪ್ರಕ್ರಿಯ ಅಧಿಕಾರಾತೀತತೆಯ ನಡುವಿನ ವ್ಯತ್ಯಾಸಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 4. Examine the concept of rule against Bias with its forms. Marks : 16
ತಾರತಮ್ಯತೆಯ ವಿರುದ್ಧದ ನಿಯಮದ ಪರಿಕಲ್ಪನೆಯನ್ನು ಅದರ ವಿವಿಧ ರೂಪಗಳೊಂದಿಗೆ ಪರೀಕ್ಷಿಸಿ.

Q. No. 5. Describe the scope of the liability of the State for the tortious acts of its servants. Marks : 16
ರಾಜ್ಯವು ತನ್ನ ನೌಕರರ ಅಪಕೃತ್ಯಗಳಿಗಾಗಿ ಇರುವ ಅದರ ಬಾಧ್ಯತೆಯ ವ್ಯಾಪ್ತಿಯನ್ನು ವರ್ಣಿಸಿ.

Q. No. 3. (b) The Central Government delegated power to the State Government to take loans from the Asian Development Bank for developing infrastructure. The State Government delegated this power to the city and municipal corporations of the State. The city corporation borrowed money from the ADB and imposed the self assessment scheme of collecting house tax within the corporation limits. A group of citizen challenged the delegation of power from the state Government to the city corporation. Decide. Marks : 6

ಕೇಂದ್ರ ಸರಕಾರವು ತನಗೆ ಇರುವ ಏಶಿಯಾ ಅಭಿವೃದ್ಧಿ ಬ್ಯಾಂಕಿನಿಂದ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಸಾಲ ಪಡೆದುಕೊಳ್ಳುವ ಅಧಿಕಾರವನ್ನು ರಾಜ್ಯ ಸರಕಾರಕ್ಕೆ ವರ್ಗಾಯಿಸಿತು. ರಾಜ್ಯ ಸರಕಾರವು ಈ ಅಧಿಕಾರವನ್ನು ನಗರಪಾಲಿಕೆ ಹಾಗೂ ಮಹಾನಗರ ಪಾಲಿಕೆಗಳಿಗೆ ವರ್ಗಾಯಿಸಿತು. ನಗರ ಪಾಲಿಕೆಯೊಂದು ಈ ಸಾಲವನ್ನು ಪಡೆದು ನಾಗರಿಕರಿಂದ ಸ್ವಯಂ ಮೌಲ್ಯಮಾಪನ ಯೋಜನೆಯಡಿಯಲ್ಲಿ ತೆರಿಗೆ ವಸೂಲಿ ಮಾಡಿತು. ಕೇಂದ್ರ ಸರಕಾರ ಪ್ರತ್ಯಾಯೋಜಿಸಿದ ಅಧಿಕಾರವನ್ನು ರಾಜ್ಯ ಸರಕಾರ ನಗರ ಮತ್ತು ಮಹಾನಗರ ಪಾಲಿಕೆಗಳಿಗೆ ಉಪ-ಪ್ರತ್ಯಾಯೋಜನೆ ಮಾಡಿದ್ದನ್ನು ಕೆಲವು ನಾಗರಿಕರು ಪ್ರಶ್ನಿಸಿದ್ದಾರೆ. ನಿರ್ಧರಿಸಿ.

Q. No. 4. (a) Discuss with the help of decided cases judicial control over delegated legislation. Marks : 10

ನಿರ್ಧರಿತ ಪ್ರಕರಣಗಳೊಂದಿಗೆ ಪ್ರತ್ಯಾಯೋಜಿತ ಶಾಸನವನ್ನು ನ್ಯಾಯಾಧೀಕರಣ ಹೇಗೆ ನಿಯಂತ್ರಿಸುತ್ತದೆಂದು ಚರ್ಚಿಸಿ.

Q. No. 4. (b) The Central Government delegated power to the department of Atomic energy to decide all issues in connection with setting up of a nuclear plant. When this delegation was challenged, the Central Govt. contended that as it was a highly technical issue, delegation was justified. Decide. Marks : 6

ಕೇಂದ್ರ ಸರಕಾರವು ಒಂದು ಪರಮಾಣು ವಿದ್ಯುತ್ ಸ್ಥಾವರದ ಸ್ಥಾಪನೆಗೆ ಸೇರಿದ ಎಲ್ಲಾ ವಿಷಯಗಳನ್ನು ನಿರ್ಧರಿಸುವ ಅಧಿಕಾರವನ್ನು ಅಣುಶಕ್ತಿ ಇಲಾಖೆಗೆ ಪ್ರತ್ಯಾಯೋಜಿಸಿತು. ಈ ಪ್ರತ್ಯಾಯೋಜನೆಯನ್ನು ನಾಗರಿಕರು ಪ್ರಶ್ನಿಸಿದಾಗ ಕೇಂದ್ರ ಸರಕಾರವು ಈ ವಿಷಯ ಬಹಳ ತಾಂತ್ರಿಕತೆಯಿಂದ ಕೂಡಿದ್ದೆಂದು, ಪ್ರತ್ಯಾಯೋಜನೆ ಸರಿ ಎಂದು ವಾದಿಸಿತು. ನಿರ್ಧರಿಸಿ.

Q. No. 5. (a) Define 'quasi-judicial' function. On what grounds are functions classified as 'quasi-judicial' ? Marks : 10

''ಅರೆ ನ್ಯಾಯಿಕ ಸ್ವರೂಪದ'' ಕಾರ್ಯವನ್ನು ವ್ಯಾಖ್ಯಾನಿಸಿ. ಯಾವ ಆಧಾರಗಳ ಮೇಲೆ ಕಾರ್ಯಗಳನ್ನು ಅರೆ ನ್ಯಾಯಿಕ ಸ್ವರೂಪದ ಕಾರ್ಯಗಳೆಂದು ಹೇಳಲಾಗುತ್ತದೆ ?



Q. No. 5. (b) Write a note on : Marks : 6

ಟಿಪ್ಪಣಿ ಬರೆಯಿರಿ :

Personal bias.

ವೈಯಕ್ತಿಕ ಪಕ್ಷಪಾತ.

Q. No. 6. (a) Discuss the various exceptions to the principles of natural justice. Refer to decided cases. Marks : 10

ನೈಸರ್ಗಿಕ ನ್ಯಾಯ ತತ್ವಗಳಿಗಿರುವ ವಿವಿಧ ಅಪವಾದಗಳನ್ನು ಚರ್ಚಿಸಿ. ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 6. (b) A writ of mandamus is dismissed by the high court without affording reasons. The petitioner challenges the dismissed on the grounds that the principles of natural justice were violated. Which principle is violated ? Discuss. Marks : 6

ಒಂದು ಮ್ಯಾಂಡಮಸ್ ರಿಟ್ಟನ್ನು ಉಚ್ಚ ನ್ಯಾಯಾಲಯ ಕಾರಣಗಳನ್ನು ನೀಡದೆ ವಜಾ ಮಾಡುತ್ತದೆ. ನೈಸರ್ಗಿಕ ನ್ಯಾಯದ ತತ್ವಗಳನ್ನು ಉಲ್ಲಂಘಿಸಲಾಗಿದೆ ಎಂದು ಅರ್ಜಿದಾರನು ವಾದಿಸುತ್ತಾನೆ. ಯಾವ ನೈಸರ್ಗಿಕ ನ್ಯಾಯದ ತತ್ವವನ್ನು ಉಲ್ಲಂಘಿಸಲಾಗಿದೆ ? ಚರ್ಚಿಸಿ.

Q. No. 7. (a) Explain the salient features of the writs of certiorari and Quo warranto. Refer to decided cases. Marks : 10

ಸರ್ಷಿಯೋರರಿ ಹಾಗೂ ಕೋವಾರೆಂಟೊ ಪರಮಾದೇಶಗಳ ಮುಖ್ಯಾಂಶಗಳನ್ನು ವಿವರಿಸಿ. ನಿರ್ಧರಿತ ಪ್ರಕರಣಗಳನ್ನು ಉಲ್ಲೇಖಿಸಿ.

Q. No. 7. (b) The Central Government notified an export promotion scheme declaring that the exporters of cotton textiles and goods would be entitled to import raw materials equal to 100% of the value of exports. Relying upon the notification, A a trader exported goods of the value of Rs. 2 crores. He then sought a licence to import raw material worth Rs. 2 crores. The Central Government refused to issue the licence. A challenges the denial in court. Decide. Marks : 6

ಹತ್ತಿ ಬಟ್ಟೆ ಮತ್ತು ಸರಕುಗಳನ್ನು ನಿರ್ಯಾತ ಮಾಡಿದವರಿಗೆ ನಿರ್ಯಾತದ ಬೆಲೆಯ 100% ಬೆಲೆಯ ಕಚ್ಚಾ ಸರಕನ್ನು ಆಮದು ಮಾಡಿಕೊಳ್ಳಲು ಅವಕಾಶ ನೀಡಲಾಗುವುದೆಂದು ಕೇಂದ್ರ ಸರಕಾರ ನಿರ್ಯಾತ ಅಭಿವೃದ್ಧಿ ಯೋಜನೆಯನ್ನು ಘೋಷಿಸಿತು. ಇದನ್ನು ಆಧಾರವಾಗಿಟ್ಟುಕೊಂಡು 'ಅ' ಎಂಬ ವ್ಯಾಪಾರಿ 2 ಕೋಟಿ ರೂಪಾಯಿ ಬೆಲೆಯ ಹತ್ತಿ ಬಟ್ಟೆ ಹಾಗೂ ಸರಕನ್ನು ನಿರ್ಯಾತ ಮಾಡಿದನು. ತನಗೆ 2 ಕೋಟಿ ರೂಪಾಯಿಯ ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಬೇಕೆಂದು ಪರವಾನಿಗೆ ಕೋರಿದನು. ಕೇಂದ್ರ ಸರಕಾರ ಪರವಾನಿಗೆ ಕೊಡಲಿಲ್ಲ. 'ಅ'ನು ಈ ನಿರ್ಧಾರವನ್ನು ಪ್ರಶ್ನಿಸುತ್ತಾನೆ. ನಿರ್ಧರಿಸಿ.

Q. No. 8. (a) Highlight the essential aspects of the contractual liability of the Government. Mention the important cases in this regard. Marks : 10

ಸರಕಾರದ ಕರಾರುಗಳಿಗೆ ಸಂಬಂಧಿಸಿದ ಬಾಧ್ಯತೆಗಳನ್ನು ಉಲ್ಲೇಖಿಸಿ. ಈ ವಿಷಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಹೆಸರಿಸಿ.

Q. No. 8. (b) Write a note on Doctrine of proportionality. Marks : 6

ಪ್ರಮಾಣಾನುಗುಣತೆ ಸಿದ್ಧಾಂತದ ಬಗ್ಗೆ ಟಿಪ್ಪಣಿ ಬರೆಯಿರಿ.

Q. No. 9. (a) Explain the principles relating to judicial control over public undertakings. Marks : 10

ಸಾರ್ವಜನಿಕ ಉದ್ದಿಮೆಗಳ ಮೇಲಿನ ನ್ಯಾಯಿಕ ಹತೋಟಿಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿ.

Q. No. 9. (b) Write a note on "mal-administration". Marks : 6

ದುರಾಡಳಿತದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

Q. No. 10. (a) Does India need the office of an Ombudsman ? Elaborate. Marks : 10

ಭಾರತಕ್ಕೆ ಓಂಬುಡ್ಸ್‌ಮನ್ ಸಂಸ್ಥೆಯ ಅವಶ್ಯಕತೆ ಇದೆಯೇ ? ವಿವರಿಸಿ.

Q. No. 10. (b) Examine the scope of the Commission of Inquiry Act, 1952. Marks : 6

ವಿಚಾರಣಾ ಆಯೋಗ ಅಧಿನಿಯಮ, 1952 ಇದರ ವ್ಯಾಪ್ತಿಯನ್ನು ಪರೀಕ್ಷಿಸಿ.

---



**III Semester 3 Year LL.B./ V Semester 5 Year B.A. LL.B. (Maj.-Min. System)/ B.B.A. LL.B./B.Com. LL.B. Examination, October/November 2021**

# ADMINISTRATIVE LAW

Duration : 3 Hours Max. Marks : 80

**Instructions : 1. Answer any five questions from group (a) each question carries 10 marks.**

**2. Answer any five questions from group (b) each question carries 6 marks.**

**3. Answers should be written either in English or Kannada completely.**

Q. No. 1. (a) Define administrative law. Explain its nature and scope. Marks : 10

ಆಡಳಿತಾತ್ಮಕ ಕಾನೂನನ್ನು ವ್ಯಾಖ್ಯಾನಿಸಿ. ಆಡಳಿತಾತ್ಮಕ ಕಾನೂನಿನ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಿ.

Q. No. 1. (b) Write a short note on rule of law. Marks : 6

ಕಾನೂನಿನ ಅಧಿಪತ್ಯದ ಕುರಿತು ಲಘು ಟಿಪ್ಪಣಿ ಬರೆಯಿರಿ.

Q. No. 2. (a) Discuss the position of the doctrine of separation of powers in India with reference to the collegium system in appointing judges to the High Courts and the Supreme Court. Marks : 10

ಕೊಲಿಜಿಯಂ ಶಿಫಾರಸ್ಸು ಮೇರೆಗೆ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳಿಗೆ ನ್ಯಾಯಾಧೀಶರನ್ನು ನೇಮಿಸುವ ಹಿನ್ನೆಲೆಯಲ್ಲಿ ಭಾರತದಲ್ಲಿ 'ಅಧಿಕಾರ ಪ್ರತ್ಯೇಕೀಕರಣ' ಸಿದ್ಧಾಂತವನ್ನು ಚರ್ಚಿಸಿ.

Q. No. 2. (b) Write a note on Droit Administratif (French Legal System) Marks : 6

ಡ್ರಾಟ್ ಎಡ್ಮಿನಿಸ್ಟ್ರಾಟಿಫ್ (France ನ ನ್ಯಾಯಿಕ ಪದ್ಧತಿ) ಕುರಿತು ಟಿಪ್ಪಣಿ ಬರೆಯಿರಿ.

Q. No. 3. (a) Explain how the parliament of India exercises control over delegated legislation. Marks : 10

ಭಾರತದಲ್ಲಿ ಸಂಸತ್ತು ಯಾವ ರೀತಿಯಲ್ಲಿ ಪ್ರತ್ಯಾಯೋಜಿತ ಶಾಸನವನ್ನು ನಿಯಂತ್ರಿಸುತ್ತದೆಂದು ವಿವರಿಸಿ.

Q. No. 3. (a) Define deligated legislation and explain the reasons for the emergence of delegated legislation in India. Marks : 10

ಪ್ರತ್ಯಾಯೋಜಿತ ಶಾಸನವನ್ನು ವ್ಯಾಖ್ಯಾನಿಸಿ ಮತ್ತು ಭಾರತದಲ್ಲಿ ಪ್ರತ್ಯಾಯೋಜಿತ ಶಾಸನದ ಹೊರಹೊಮ್ಮುವಿಕೆಗೆ ಇರುವ ಕಾರಣಗಳನ್ನು ವಿವರಿಸಿ.

Q. No. 3. (b) The Parent Act empowered the municipality to impose sales tax at the rate of 25/- per bottle of foreign liquor. But the municipality failed to exercise the power. The state government imposed the tax itself for the municipality. The action of the government was challenged. Decide. Marks : 6

ಒಂದು ಮೂಲ ಕಾನೂನು ಮುನ್ಸಿಪಾಲಿಟಿಗೆ ಅಧಿಕಾರ ನೀಡಿ ಒಂದೊಂದು ಬಾಟಲ್ ವಿದೇಶೀ ಮದ್ಯಕ್ಕೆ ತಲಾ ರೂ. 25/- ರಂತೆ ಮಾರಾಟ ತೆರಿಗೆ ವಿಧಿಸುವಂತೆ ಅನುವು ಮಾಡಿತ್ತು. ಆದರೆ ಈ ಅಧಿಕಾರವನ್ನು ಪ್ರಯೋಗಿಸಲು ಮುನಿಸಿಪಾಲಿಟಿಯು ವಿಫಲವಾಯಿತು. ರಾಜ್ಯ ಸರಕಾರವು ಮುನಿಸಿಪಾಲಿಟಿಗಾಗಿ ಈ ದರವನ್ನು ತಾನೇ ನಿಗದಿಪಡಿಸಿತು. ಸರಕಾರದ ಈ ಕ್ರಮವನ್ನು ಪ್ರಶ್ನಿಸಲಾಯಿತು. ನಿರ್ಧರಿಸಿ.

Q. No. 4. (a) Discuss the scope of Parent Act's control over deligated legislation with decided cases. Marks : 10

ಪ್ರತ್ಯಾಯೋಜಿತ ಶಾಸನದ ಮೇಲಿನ ಮೂಲ ಕಾನೂನಿನ (ಸಂಸದೀಯ) ನಿಯಂತ್ರಣವನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 4. (b) The Kerala Education code provided that teachers working in the educational institutions would super annuate on attaining 60 years of age. There after Kerala Education Act and Rules were enacted prescribing 58 years of age for superannuation. The pititioner appointed under Kerala Education Code was retired at the age of 58 years by the management and hence challenged the action. Decide. Marks : 6

ಕೇರಳದ ವಿದ್ಯಾಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರು ತಮ್ಮ 60ನೇ ವಯಸ್ಸು ಪೂರ್ತಿಗೊಂಡ ಕೂಡಲೇ ವೃತ್ತಿಯಿಂದ ನಿವೃತ್ತಿ ಹೊಂದುವರು ಎಂಬುದಾಗಿ ಕೇರಳ ಶಿಕ್ಷಣ ಸಂಹಿತೆಯು ತಿಳಿಸಿರುತ್ತದೆ. ತದನಂತರ ಕೇರಳ ಶಿಕ್ಷಣ ಕಾಯ್ದೆ ಮತ್ತು ನಿಯಮಗಳನ್ನು ಜಾರಿ ಮಾಡಿ ನಿವೃತ್ತಿ ವಯಸ್ಸನ್ನು 58 ವರ್ಷ ಎಂದು ನಿಗದಿ ಮಾಡಲಾಯಿತು. ಅರ್ಜಿದಾರ ಅಧ್ಯಾಪಕರು ಕೇರಳ ಶಿಕ್ಷಣ ಸಂಹಿತೆಯಡಿಯಲ್ಲಿ ನೇಮಕಗೊಂಡಿದ್ದರೂ ಕೇರಳ ಶಿಕ್ಷಣ ಕಾಯ್ದೆಯ ಅನುಸಾರ ಅವರನ್ನು ಆಡಳಿತ ಮಂಡಳಿಯು 58 ವರ್ಷ ವಯಸ್ಸು ಪೂರ್ತಿಗೊಂಡೊಡನೆ ನಿವೃತ್ತಿ ಮಾಡಿತು. ಈ ಕ್ರಮವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿ.



Q. No. 5. (a) Discuss the concept of "Fair Hearing" with the help of decided cases. Refer to stages of fair hearing. Marks : 10

"ನ್ಯಾಯ ಸಮ್ಮತ ಸುನಾವಣೆ" ಎಂಬ ಪರಿಕಲ್ಪನೆಯನ್ನು ತೀರ್ಮಾನಿಸಿದ ಪ್ರಕರಣಗಳೊಂದಿಗೆ ಚರ್ಚಿಸಿರಿ. ನ್ಯಾಯ ಸಮ್ಮತ ಸುನಾವಣೆಯ ವಿವಿಧ ಹಂತಗಳನ್ನು ಉಲ್ಲೇಖಿಸಿ.

Q. No. 5. (b) According to the provisions of the Act, the Commercial Tax Officer Made an opinion that pititioner was not liable to pay the tax. Still the officer referred the matter to his superior. On his instructions, the commercial tax officer imposed tax on the pititioner. The petitioner challenged the same. Decide. Marks : 6

ಕಾಯ್ದೆಯ ಉಪಬಂಧಗಳಿಗೆ ಅನುಸಾರವಾಗಿ ವಾಣಿಜ್ಯ ತೆರಿಗೆ ಅಧಿಕಾರಿಯು ತಮ್ಮ ಅಭಿಪ್ರಾಯದಂತೆ ಅರ್ಜಿದಾರರು ತೆರಿಗೆ ಪಾವತಿಯ ಬಾಧ್ಯತೆ ಹೊಂದಿರುವುದಿಲ್ಲ ಎಂಬುದಾಗಿತ್ತು. ಆದರೂ ತಮ್ಮ ಮೇಲಾಧಿಕಾರಿಗೆ ಈ ವಿಷಯವನ್ನು ಮಂಡಿಸಿದರು. ಈ ಮೇಲಾಧಿಕಾರಿಯ ಸೂಚನೆ ಮೇರೆಗೆ ವಾಣಿಜ್ಯ ತೆರಿಗೆ ಅಧಿಕಾರಿಯು ತೆರಿಗೆ ವಿಧಿಸಿದರು. ಈ ಕ್ರಮವನ್ನು ಅರ್ಜಿದಾರರು ಪ್ರಶ್ನಿಸುತ್ತಾರೆ. ನಿರ್ಧರಿಸಿ.

Q. No. 6. (a) Explain with the help of decided cases the various kinds of bias and its impact on fair decision. Marks : 10

ನಿರ್ಧರಿತ ಪ್ರಕರಣಗಳೊಂದಿಗೆ ಪಕ್ಷಪಾತದ ವಿವಿಧ ಪ್ರಕಾರಗಳು ಮತ್ತು ನ್ಯಾಯ ಸಮ್ಮತ ತೀರ್ಪಿನಲ್ಲಿ ಅದರ ಪರಿಣಾಮಗಳನ್ನು ವಿವರಿಸಿ.

Q. No. 6. (b) A lecturer had been granted leave for doing M.Phil. and in violation of leave condition, had joined Ph.D. course. She was given notice and after considering her reply where is she admitted to joining Ph.D. course, she was terminated from the service. She challenged the action as violation of Principle of natural justice. Marks : 6

ಒಂದು ಉಪನ್ಯಾಸಕರಿಗೆ M.Phil. ವ್ಯಾಸಂಗ ಮಾಡುವುದಕ್ಕಾಗಿ ರಜೆ ನೀಡಲಾಗಿತ್ತು ಮತ್ತು ಈ ರಜಾ ನಿಬಂಧನೆಯನ್ನು ಉಲ್ಲಂಘಿಸಿ ಅವರು Ph.D. ಕೋರ್ಸಿಗೆ ಪ್ರವೇಶ ಪಡೆದರು. ಇದರಿಂದಾಗಿ ಉಪನ್ಯಾಸಕಿಗೆ ಒಂದು ನೋಟೀಸ್ ನೀಡಲಾಗಿತ್ತು ಮತ್ತು ಈ ನೋಟೀಸ್‌ಗೆ ಅವರು ನೀಡಿದ ಉತ್ತರವನ್ನು ಆಧರಿಸಿ ಅವರು ಮಾಡಿದ ಉಲ್ಲಂಘನೆಯನ್ನು ಒಪ್ಪಿರುವುದರಿಂದ ಅವರನ್ನು ಸೇವೆಯಿಂದ ವಜಾ ಮಾಡಲಾಯಿತು. ಈ ಕ್ರಮವನ್ನು ನೈಸರ್ಗಿಕ ಸಿದ್ಧಾಂತದ ಉಲ್ಲಂಘನೆ ಎಂದು ಪ್ರಶ್ನಿಸುತ್ತಾರೆ. ನಿರ್ಧರಿಸಿ.

Q. No. 7. (a) Explain the conditions and grounds for the issue of Mandamous writ with the help of decided cases. Marks : 10

ಮ್ಯಾಂಡಮಸ್ ರಿಟ್‌ನ್ನು ಹೊರಡಿಸಲು ಇರುವ ಷರತ್ತುಗಳನ್ನು ಮತ್ತು ಕಾರಣಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 7. (b) Write a note on grounds of judicial review on administrative discretion. Marks : 6

ಆಡಳಿತಾತ್ಮಕ ವಿವೇಚನೆಯ ಮೇಲಿನ ನ್ಯಾಯಿಕ ಪರಿಶೀಲನೆಯ ವಿವಿಧ ಕಾರಣಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

Q. No. 8. (a) Critically examine the scope of the liability of state in tort with the help of decided cases. Marks : 10

ಅಪಕೃತ್ಯಗಳಿಗೆ ಸರ್ಕಾರದ ಬಾಧ್ಯತೆಯ ವ್ಯಾಪ್ತಿಯನ್ನು ನಿರ್ಧರಿತ ಪ್ರಕರಣಗಳೊಂದಿಗೆ ಪರಿಭಾಷಿಸಿರಿ.

Q. No. 8. (b) The applications were invited by C.B.I. for filling up 200 posts of constables. The selection process consisted of a written examination and interview. There were some complaints of corruption and favouritism during the process of physical test and written test and accordingly the entire selection process was cancelled. It was also found that only in respect of 31 specific candidates, the complaints were true. The cancellation order was challenged. Refer to the appropriate provision and decide. Marks : 6

ಕೇಂದ್ರೀಯ ತನಿಖಾ ಸಂಸ್ಥೆಯಲ್ಲಿನ 200 ಕಾನ್‌ಸ್ಟೇಬಲ್ ಹುದ್ದೆಯ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆಯ್ಕೆ ಪ್ರಕ್ರಿಯೆ ಒಂದು ಬರಹ ರೂಪದ ಪರೀಕ್ಷೆ ಮತ್ತು ಸಂದರ್ಶನವನ್ನು ಒಳಗೊಂಡಿತ್ತು. ಈ ನಡುವೆ ಬರಹ ಪರೀಕ್ಷೆ ಮತ್ತು ದೈಹಿಕ ಪರೀಕ್ಷೆ ಸಮಯದಲ್ಲಿ ಭ್ರಷ್ಟಾಚಾರ ಮತ್ತು ಪಕ್ಷಪಾತವು ನಡೆದಿರುತ್ತದೆ ಎಂಬ ದೂರುಗಳು ಬಂದಿರುವುದರಿಂದ ಕೇಂದ್ರೀಯ ತನಿಖಾ ಸಂಸ್ಥೆಯು ಪೂರ್ಣವಾಗಿ ಆಯ್ಕೆ ಪ್ರಕ್ರಿಯೆಯನ್ನು ರದ್ದು ಪಡಿಸಿತು. ಆದರೆ ಪ್ರಾಥಮಿಕ ತನಿಖಾ ವರದಿ ಪ್ರಕಾರ ಈ ದೂರುಗಳು ಕೇವಲ 31 ನಿರ್ದಿಷ್ಟ ಅಭ್ಯರ್ಥಿಗಳ ವಿಷಯದಲ್ಲಿ ಸರಿ ಕಂಡುಬಂದಿತ್ತು. ಈ ರದ್ದತಿ ಆದೇಶವನ್ನು ಪ್ರಶ್ನಿಸಲಾಯಿತು. ಸೂಕ್ತ ಉಪಬಂಧದೊಂದಿಗೆ ನಿರ್ಧರಿಸಿ.

Q. No. 9. (a) Critically examine the role of Lokpal and Lokayuktha in India in Public administration. Marks : 10

ಭಾರತದಲ್ಲಿ ಸಾರ್ವಜನಿಕ ಆಡಳಿತದಲ್ಲಿ ಲೋಕಪಾಲ್ ಮತ್ತು ಲೋಕಾಯುಕ್ತರ ಪಾತ್ರವನ್ನು ಟೀಕಾತ್ಮಕವಾಗಿ ಪರೀಕ್ಷಿಸಿ.

Q. No. 9. (b) Write a note on role of Central Vigilance Commission and its status. Marks : 6

ಕೇಂದ್ರೀಯ ಜಾಗೃತ ಆಯೋಗಗಳ ಪಾತ್ರ ಮತ್ತು ಅದರ ಸ್ಥಾನಮಾನದ ಮೇಲೆ ಒಂದು ಟಿಪ್ಪಣಿ ಬರೆಯಿರಿ.

Q. No. 10.(a) Explain the advantages and scope of various controls over public corporations in India. Marks : 10

ಭಾರತದಲ್ಲಿ ಸಾರ್ವಜನಿಕ ನಿಗಮಗಳ ಮೇಲಿನ ವಿವಿಧ ನಿಯಂತ್ರಣಗಳ ಉಪಯುಕ್ತತೆ ಮತ್ತು ವ್ಯಾಪ್ತಿಯನ್ನು ವಿವರಿಸಿರಿ.

Q. No. 10.(b) Scope of Commission of Inquiry Act, 1952. Marks : 6

ವಿಚಾರಣಾ ಆಯೋಗ ಕಾಯ್ದೆ, 1952 ರ ವ್ಯಾಪ್ತಿ.

---



## III Semester 3 Year LL.B./V Semester 5 Year B.A.LL.B. (Maj.-Min)/ B.B.A.LL.B./B.Com.LL.B. Examination, March/April 2021
## ADMINISTRATIVE LAW

Duration : 3 Hours Max. Marks : 80

**Instructions : 1. Answer any five Questions from group (a) each question carries 10 marks.**

**2. Answer any five Questions from group (b) each question carries 06 marks.**

**3. Answers should be written either in English or Kannada completely.**

Q. No. 1. (a) Discuss the various definitions of administrative law. State its nature and scope. Marks : 10

ಆಡಳಿತಾತ್ಮಕ ಕಾನೂನಿನ ವಿವಿಧ ವ್ಯಾಖ್ಯಾನಗಳನ್ನು ಚರ್ಚಿಸಿ. ಅದರ ಸ್ವಭಾವ ಮತ್ತು ವ್ಯಾಪ್ತಿಯನ್ನು ತಿಳಿಸಿ.

Q. No. 1. (b) Write a note on Droit administratiff. Marks : 6

ಡ್ರಾಯಿಟ್ ಅಡ್ಮಿನಿಸ್ಟ್ರೇಟಿಫ್ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

Q. No. 2. (a) 'The dividing line between judicial and quasi-judicial function is very thin and gradually been obliterated.' Explain this observation in the light of classification of administrative action. Marks : 10

'ನ್ಯಾಯಿಕ ಮತ್ತು ಅರೆ-ನ್ಯಾಯಿಕ ಕಾರ್ಯಗಳ ನಡುವಿನ ವಿಭಾಗಿಸುವ ರೇಖೆಯು ಬಹಳ ತೆಳುವಾಗಿದೆ ಮತ್ತು ಕ್ರಮೇಣ ಅಳಿಸಿ ಹೋಗುತ್ತಿದೆ.' ಈ ಅವಲೋಕನವನ್ನು ಆಡಳಿತಾತ್ಮಕ ಕ್ರಮಗಳ ವರ್ಗೀಕರಣವನ್ನು ಉಲ್ಲೇಖಿಸಿ ವಿವರಿಸಿ.

Q. No. 2. (b) Doctrine of separation of powers in Indian Constitution. Marks : 6

ಭಾರತದ ಸಂವಿಧಾನದಲ್ಲಿ ಅಧಿಕಾರ ವಿಂಗಡನಾ ಸಿದ್ಧಾಂತ.

Q. No. 6. Define administrative discretion. Is the judicial review over exercise of administrative discretionary powers a necessity ? Examine. Marks : 16

ಆಡಳಿತಾತ್ಮಕ ವಿವೇಚನೆಯನ್ನು ವ್ಯಾಖ್ಯಾನಿಸಿ. ಆಡಳಿತಾತ್ಮಕ ವಿವೇಚನಾಧಿಕಾರದ ಮೇಲಿನ ನ್ಯಾಯಿಕ ಪರಿಶೀಲನೆಯು ಅಗತ್ಯವೇ ? ಪರೀಕ್ಷಿಸಿ.

Q. No. 7. Explain the grounds for the issue of writ of Mandamus and Quo warranto. Marks : 16

ಮ್ಯಾಂಡಮಸ್ ಮತ್ತು ಕೋ ವಾರಂಟೋ ರಿಟ್‌ನ್ನು ನೀಡುವ ಆಧಾರಗಳನ್ನು ವಿವರಿಸಿ.

Q. No. 8. Write note on **any two** of the following : Marks : 2×8=16

ಈ ಕೆಳಗಿನ ಎರಡಕ್ಕೆ ಟಿಪ್ಪಣಿ ಬರೆಯಿರಿ :

(a) Doctrine of Legitimate Expectation

ಕಾನೂನುಬದ್ಧ ಅಪೇಕ್ಷೆ ತತ್ವ

(b) Tortious Liability of State

ಅಪಕೃತ್ಯದಲ್ಲಿ ರಾಜ್ಯದ ಹೊಣೆಗಾರಿಕೆ

(c) Parliamentary control over Public Corporations.

ಸಾರ್ವಜನಿಕ ಸಂಸ್ಥೆಗಳ ಮೇಲೆ ಸಂಸತ್ತಿನ ನಿಯಂತ್ರಣ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಬಗೆಹರಿಸಿ :

(a) A rule was made under the Parent Act which prohibited any person from playing music or orchestra in any public place within 100 yards of any dwelling house.

Decide the validity of the rule.

ಮೂಲ ಕಾನೂನಿನ ಅಡಿಯಲ್ಲಿ ಒಂದು ನಿಯಮವನ್ನು ಮಾಡಿ ಅದರಂತೆ ವಾಸಸ್ಥಳದಿಂದ 100 ಯಾರ್ಡ್ ಅಂತರದಲ್ಲಿ ಯಾವುದೇ ಸಂಗೀತ ಅಥವಾ ಆರ್ಕೆಸ್ಟ್ರವನ್ನು ಯಾವುದೇ ವ್ಯಕ್ತಿ ನಡೆಸುವಂತಿಲ್ಲ ಎಂಬ ನಿರ್ಬಂಧ ಹೇರಲಾಯಿತು.

ಈ ನಿಯಮದ ವಿಧಿಬದ್ಧತೆಯನ್ನು ನಿರ್ಧರಿಸಿ.



(b) In contempt of Court proceedings, the same judge who heard and decided the case passed the order of punishment against a witness to the case for his scandalous remarks which brought the court to disrepute. Aggrieved by the order, he challenged the action. Will he succeed ? Decide.

ಒಂದು ನ್ಯಾಯಾಂಗ ನಿಂದನಾ ಪ್ರಕರಣದ ಪ್ರಕ್ರಿಯೆಯಲ್ಲಿ ಒಬ್ಬ ಸಾಕ್ಷಿದಾರನು ಪ್ರಕ್ರಿಯೆ ಸಂದರ್ಭದಲ್ಲಿ ಅವಹೇಳನಾಕಾರಿಯಾದ ಮಾತುಗಳನ್ನಾಡಿ ನ್ಯಾಯಾಂಗದ ಗೌರವಕ್ಕೆ ಧಕ್ಕೆ ತಂದಿರುತ್ತಾನೆ. ಈ ಪ್ರಕರಣವನ್ನು ಆಲಿಸಿದ ನ್ಯಾಯಾಧಿಕಾರಿಯು ಸಾಕ್ಷಿದಾರನನ್ನು ನ್ಯಾಯಾಂಗ ನಿಂದನೆಗಾಗಿ ಶಿಕ್ಷೆಗೆ ಗುರಿಪಡಿಸುತ್ತಾರೆ. ಈ ಕ್ರಮದಿಂದ ನೊಂದ ಅವನು ಈ ಕ್ರಮವನ್ನು ಪ್ರಶ್ನಿಸುತ್ತಾನೆ. ಅವನು ಸಫಲನಾಗುವನೇ ? ನಿರ್ಧರಿಸಿ.

(c) Anuj, an engineering student was taken into police custody and was detained for a prolonged period under the Maintenance of Internal Security Act (MISA). His whereabouts was enquired by his father with the police but to no avail. What is the remedy and give reasons ?

ಆಂತರಿಕ ಭದ್ರತಾ ನಿರ್ವಹಣೆ ಕಾಯ್ದೆಯಡಿ (ಮಿಸಾ) ಅನುಜ್ ಎಂಬ ಇಂಜಿನಿಯರಿಂಗ್ ವಿದ್ಯಾರ್ಥಿಯನ್ನು ಪೋಲೀಸರು ಬಂಧಿಸಿ ಅವನನ್ನು ದೀರ್ಘಕಾಲದವರೆಗೆ ಬಂಧನದಲ್ಲಿಡುತ್ತಾರೆ. ಈ ಹುಡುಗನ ತಂದೆಯು ಪೋಲೀಸ್ ಅಧಿಕಾರಿಗಳಲ್ಲಿ, ಅವನು ಯಾವ ಸ್ಥಳದಲ್ಲಿ ಇರುವನು ಎಂಬುದರ ಬಗ್ಗೆ ವಿಚಾರಿಸುತ್ತಾರೆ. ಆದರೆ ಇದು ಯಾವುದೇ ಪ್ರಯೋಜನ ನೀಡಲಿಲ್ಲ. ಸೂಕ್ತ ಕಾರಣಗಳೊಂದಿಗೆ ಪರಿಹಾರ ಸೂಚಿಸಿ.

0204/2049/0623

II Semester 3 Yrs. LL.B./VI Sem. 5 Year B.A.LL.B./B.B.A.LL.B./
B.Com.LL.B./B.A.LL.B. (Maj.-Min. System)
Examination, October/November 2022 (June 2022)

# ADMINISTRATIVE LAW

Duration : 3 Hours  Max. Marks : 100

**Instructions :** **1. Answer Q. No. 9 and any five of the remaining.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or in Kannada completely.**

Q. No. 1. Define Administrative Law. Explain its characteristic features and scope. Marks : 16

ಆಡಳಿತದ ಕಾನೂನನ್ನು ವ್ಯಾಖ್ಯಾನಿಸಿ. ಆಡಳಿತದ ಕಾನೂನಿನ ವಿಶಿಷ್ಟ ಲಕ್ಷಣಗಳನ್ನು ಮತ್ತು ವ್ಯಾಪ್ತಿಯನ್ನು ವಿವರಿಸಿ.

Q. No. 2. 'The dividing line between administrative and quasi-judicial functions is very thin and is gradually getting obliterated.' Discuss. Marks : 16

'ಆಡಳಿತಾತ್ಮಕ ಮತ್ತು ಅರೆ-ನ್ಯಾಯಿಕ ಕಾರ್ಯಗಳ ವಿಭಜನಾ ರೇಖೆಯು ತುಂಬಾ ತೆಳುವಾಗಿರುತ್ತದೆ ಮತ್ತು ಕ್ರಮೇಣವಾಗಿ ಅಳಿಸಿಹೋಗುತ್ತಿದೆ.' ಚರ್ಚಿಸಿ.

Q. No. 3. Discuss the constitutionality of obligated legislation in U.S.A. and India. Marks : 16

ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಭಾರತದಲ್ಲಿ ಪ್ರತ್ಯಾಯೋಜಿತ ಶಾಸನದ ಸಂವಿಧಾನಾತ್ಮಕತೆಯನ್ನು ಕುರಿತು ಚರ್ಚಿಸಿರಿ.

Q. No. 4. Explain the effects of substantive and procedural ultra-vires on delegated legislation. Refer to judicial decisions. Marks : 16

ವಿಷಯಾತ್ಮಕ ಮತ್ತು ಪ್ರಕ್ರಿಯಾತ್ಮಕ ಮಿತಿ ಮೀರುವಿಕೆಯು ಪ್ರತ್ಯಾಯೋಜಿತ ಶಾಸನಗಳ ಮೇಲೆ ಬೀರುವ ಪರಿಣಾಮಗಳನ್ನು ವಿವರಿಸಿ. ನ್ಯಾಯಿಕ ತೀರ್ಮಾನಗಳನ್ನು ಉಲ್ಲೇಖಿಸಿ.

Q. No. 5. Explain 'Nemo in propria causa judex esse debet' with decided cases. Marks : 16

'ನೆಮೋ ಇನ್ ಪ್ರೊಪ್ರಿಯಾ ಕಾಸಾ ಜುಡೆಕ್ಸ್ ಎಸ್ಸೆ ಡೆಬೆಟ್' ಎಂಬ ಉಪಬಂಧವನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

UNIT – II

Q. No. 2. a) What is delegated legislation ? Explain the reasons which prompted the growth of delegated legislation ? Marks : 10

ಪ್ರತ್ಯಾಯೋಜಿತ ಶಾಸನ ಎಂದರೇನು ? ಪ್ರತ್ಯಾಯೋಜಿತ ಶಾಸನಗಳ ಬೆಳವಣಿಗೆಯಲ್ಲಿನ ಕಾರಣಗಳನ್ನು ವಿವರಿಸಿ.

OR/ಅಥವಾ

Q. No. 2. a) Discuss the legislative control over delegated legislation. Marks : 10

ಪ್ರತ್ಯಾಯೋಜಿತ ಶಾಸನಗಳ ಮೇಲಿನ ಶಾಸಕಾಂಗದ ನಿಯಂತ್ರಣವನ್ನು ಕುರಿತು ಚರ್ಚಿಸಿ.

Q. No. 2. b) State the facts and findings in Jatindranath Gupta Vs Province of Bihar [AIR 1949 FC 175]. Marks : 6

ಜತೀಂದ್ರನಾಥ್ ಗುಪ್ತಾ Vs ಬಿಹಾರ ಪ್ರಾಂತ್ಯ [AIR 1949 FC 175]. ಈ ಪ್ರಕರಣ ವಾಸ್ತವಾಂಶ ಮತ್ತು ನಿರ್ಣಯವನ್ನು ತಿಳಿಸಿ.

OR/ಅಥವಾ

Q. No. 2. b) The Gujarath Municipal Corporation Act empowered the Municipality to impose tax on land, buildings. In the exercise of the powers the authorities imposed tax on machinery installed in the building premises. Aggrieved by the levy of tax, the owner of an establishment challenged the action. Decide its validity. Marks : 6

ಗುಜರಾತ್ ಮುನ್ಸಿಪಾಲ್ ಕಾರ್ಪೊರೇಶನ್ ಕಾಯ್ದೆಯು ಭೂಮಿ, ಕಟ್ಟಡಗಳು ಇವುಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರವನ್ನು ಮುನ್ಸಿಪಾಲಿಟಿಗೆ ನೀಡುತ್ತದೆ. ಈ ಅಧಿಕಾರದ ಪ್ರಯೋಗದಲ್ಲಿ ಮುನ್ಸಿಪಾಲಿಟಿಯು ಕಟ್ಟಡದ ಒಳಗಿದ್ದಂತಹ ಯಂತ್ರಗಳ ಮೇಲೆ ತೆರಿಗೆ ವಿಧಿಸುತ್ತಾರೆ. ಇದರಿಂದ ಅನ್ಯಾಯಕ್ಕೊಳಗಾದ ಒಂದು ಸಂಸ್ಥೆಯ ಮಾಲೀಕರು ಈ ಕ್ರಮವನ್ನು ಪ್ರಶ್ನಿಸುತ್ತಾರೆ. ಇದರ ಕ್ರಮಬದ್ಧತೆಯನ್ನು ನಿರ್ಧರಿಸಿ.

UNIT – III

Q. No. 3. a) Explain the stages of fair hearing with decided cases. Marks : 10

ನ್ಯಾಯ ಸಮ್ಮತ ಸುನಾವಣೆಯ ವಿವಿಧ ಹಂತಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

OR/ಅಥವಾ



Q. No. 3. a) Briefly discuss with judicial decisions the different forms of bias. Marks : 10

ಪಕ್ಷಪಾತದ ವಿವಿಧ ಪ್ರಕಾರಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ಸಂಕ್ಷಿಪ್ತವಾಗಿ ಚರ್ಚಿಸಿ.

Q. No. 3. b) Exceptions to principles of natural justice. Marks : 6

ನೈಸರ್ಗಿಕ ನ್ಯಾಯ ಸಿದ್ಧಾಂತಕ್ಕಿರುವ ಅಪವಾದಗಳು.

OR/ಅಥವಾ

Q. No. 3. b) A Co-operative Society applied for a license. 4 judges heard the application, of whom 3 were members of the Co-operative Society. The society was granted the license applied for as it complied with all the conditions. The grant was challenged. Decide. Marks : 6

ಒಂದು ಸಹಕಾರಿ ಸಂಸ್ಥೆಯು ಪರವಾನಗಿಗಾಗಿ ಅರ್ಜಿ ಸಲ್ಲಿಸಿತು. ಈ ಅರ್ಜಿಯನ್ನು ಪರಿಶೀಲಿಸುವ ಮಂಡಳಿಯ 4 ನ್ಯಾಯಾಧೀಶರುಗಳಲ್ಲಿ 3 ನ್ಯಾಯಾಧೀಶರುಗಳು ಈ ಸಹಕಾರಿ ಸಂಸ್ಥೆಯ ಸದಸ್ಯರುಗಳಾಗಿರುತ್ತಾರೆ. ಸಹಕಾರಿ ಸಂಸ್ಥೆಯು ಪರವಾನಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಕಾರಣ ಪರವಾನಿಗೆಯನ್ನು ನೀಡಲಾಯಿತು. ಈ ಪರವಾನಿಗೆ ನೀಡಿಕೆಯನ್ನು ಪ್ರಶ್ನಿಸಲಾಯಿತು. ನಿರ್ಧರಿಸಿ.

UNIT – IV

Q. No. 4. a) Explain the scope of judicial review on administrative discretion. Marks : 10

ಆಡಳಿತಾತ್ಮಕ ವಿವೇಚನಾಧಿಕಾರದ ಮೇಲಿನ ನ್ಯಾಯಿಕ ವಿಮರ್ಶೆಯ ವ್ಯಾಪ್ತಿಯನ್ನು ವಿವರಿಸಿ.

OR/ಅಥವಾ

Q. No. 4. a) Explain doctrine of proportionality and doctrine of legitimate expectation. Marks : 10

ಪ್ರಮಾಣುಸಾರ ತತ್ವ ಮತ್ತು ಕಾನೂನುಬದ್ಧ ಅಪೇಕ್ಷೆ ತತ್ವವನ್ನು ವಿವರಿಸಿ.

Q. No. 4. b) State liability in contract. Marks : 6

ಕರಾರುಗಳಲ್ಲಿ ರಾಜ್ಯದ ಹೊಣೆಗಾರಿಕೆ.

OR/ಅಥವಾ

Q. No. 4. b) Writ of Quo-warranto. Marks : 6

ಕೊ-ವಾರಂಟೊ ರಿಟ್.

UNIT – V

Q. No. 5. a) 'Controls over public corporations need to be intensified considering its significance.' Examine. Marks : 10

'ಸಾರ್ವಜನಿಕ ಸಂಸ್ಥೆಗಳ ಮೇಲಿನ ನಿಯಂತ್ರಣಗಳನ್ನು ಅವುಗಳ ಉಪಯುಕ್ತತೆ ದೃಷ್ಟಿಯಿಂದ ತೀವ್ರಗೊಳಿಸುವ ಅಗತ್ಯತೆ ಇರುತ್ತದೆ.' ಪರೀಕ್ಷಿಸಿ.

OR/ಅಥವಾ

Q. No. 5. a) Examine the role of Lokayukta in Public Administration. Marks : 10

ಸಾರ್ವಜನಿಕ ಆಡಳಿತ ವಲಯದಲ್ಲಿ ಲೋಕಾಯುಕ್ತರವರ ಪಾತ್ರವನ್ನು ಪರೀಕ್ಷಿಸಿ.

Q. No. 5. b) Central Vigilance Commission. Marks : 6

ಕೇಂದ್ರ ಜಾಗೃತ ಆಯೋಗ/ವಿಚಕ್ಷಣಾ ಆಯೋಗ.

OR/ಅಥವಾ

Q. No. 5. b) Classification of Public Corporations. Marks : 6

ಸಾರ್ವಜನಿಕ ಸಂಸ್ಥೆಗಳ ವರ್ಗೀಕರಣ.

---



**III Semester 3 Year LL.B./V Semester 5 Year B.A.LL.B. (Maj.-Min. System)/ B.B.A.LL.B./B.Com.LL.B. Examination, October/November 2022 (June 2022)**

**ADMINISTRATIVE LAW**

Duration : 3 Hours Max. Marks : 80

**Instructions :** 
1. **Answer all five Units.**
2. **One essay type question and short note/Problems is compulsory from each Unit.**
3. **Figures to the right indicate marks.**
4. **Answers should be written either in English or in Kannada completely.**

UNIT – I

Q. No. 1. a) 'Administrative law is an adjective law dealing with the principles of Governance'. Explain the statement with reference to its definitions and compelling reasons for its growth. Marks : 10

'ಆಡಳಿತದ ಕಾನೂನು ಆಡಳಿತಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವ್ಯವಹರಿಸುವ ಗುಣವಿಶೇಷಣ ಕಾನೂನು'. ಈ ಹೇಳಿಕೆಯನ್ನು ಆಡಳಿತದ ಕಾನೂನಿನ ವ್ಯಾಖ್ಯಾನಗಳು ಮತ್ತು ಅದರ ಬೆಳವಣಿಗೆಯಲ್ಲಿರುವ ಬಲವಾದ ಕಾರಣಗಳೊಂದಿಗೆ ಪರಿಭಾಷಿಸಿ.

OR/ಅಥವಾ

Q. No. 1. a) What are the characteristics of administrative functions. Distinguish between judicial and quasi-judicial functions. Marks : 10

ಆಡಳಿತಾತ್ಮಕ ಪ್ರಕಾರ್ಯಗಳ ಗುಣಲಕ್ಷಣಗಳೇನು ? ನ್ಯಾಯಿಕ ಮತ್ತು ಅರೆ-ನ್ಯಾಯಿಕ ಕಾರ್ಯಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

Q. No. 1. b) Administrative Law V/s Constitutional Law. Marks : 6

ಆಡಳಿತಾತ್ಮಕ ಕಾನೂನು V/s ಸಂವಿಧಾನಿಕ ಕಾನೂನು.

OR/ಅಥವಾ

Q. No. 1. b) Droit administratiff and Rule of Law. Marks : 6

ಡ್ರಾಯಿಟ್ ಅಡ್ಮಿನಿಸ್ಟೇಟಿಫ್ ಮತ್ತು ಕಾನೂನಿನ ಆಡಳಿತ.

Q. No. 6. Discuss the law relating to promissory estoppel against the government of India. Marks : 16

ಭಾರತದಲ್ಲಿ ಸರಕಾರದ ವಿರುದ್ಧ ವಿಬಂಧ ತತ್ವಕ್ಕೆ ಸಂಬಂಧಿಸಿದ ಕಾನೂನನ್ನು ಚರ್ಚಿಸಿರಿ.

Q. No. 7. Explain the procedural safeguards available to a civil servant in case of his dismissal or removal from service. Marks : 16

ಲೋಕನೌಕರನೊಬ್ಬನನ್ನು ಸೇವೆಯಿಂದ ವಜಾಗೊಳಿಸುವ ಅಥವಾ ತೆಗೆದು ಹಾಕುವ ಸಂದರ್ಭದಲ್ಲಿ ಅವನಿಗೆ ದೊರಕುವ ಪ್ರಕ್ರಿಯೆಗೆ ಸಂರಕ್ಷಣೆಗಳನ್ನು ವಿವರಿಸಿರಿ.

Q. No. 8. Write short notes on **any two** of the following : Marks : 8×2=16

ಕೆಳಗಿನವುಗಳಲ್ಲಿ ಯಾವುದೇ ಎರಡರ ಕುರಿತು ಲಘು ಟಿಪ್ಪಣಿ ಬರೆಯಿರಿ :

(a) Power of modification of statute

ಶಾಸನಗಳ ಮಾರ್ಪಾಡು ಮಾಡುವ ಅಧಿಕಾರ

(b) Rule of law

ಕಾನೂನಿನ ಆಧಿಪತ್ಯ

(c) Control over public undertakings.

ಸಾರ್ವಜನಿಕ ನಿಗಮಗಳ ನಿಯಂತ್ರಣ.

Q. No. 9. Solve **any two** of the following : Marks : 10×2=20

ಕೆಳಗಿನ ಯಾವುದೇ **ಎರಡನ್ನು** ಇತ್ಯರ್ಥಪಡಿಸಿರಿ :

(a) The cane commissioner had power to reserve sugarcane areas for respective sugar factories. However, at the dictation of the Chief Minister he excluded 90 villages from the area reserved by him. Is his action valid ?

ಕಬ್ಬು ಆಯುಕ್ತರಿಗೆ ಕಬ್ಬು ಬೆಳೆಯುವ ಪ್ರದೇಶಗಳನ್ನು ಸಕ್ಕರೆ ಕಾರ್ಖಾನೆಗಳಿಗೆ ಕಾಯ್ದಿರಿಸುವ ಅಧಿಕಾರ ಇತ್ತು. ಆದರೆ ಆಯುಕ್ತರು ಮುಖ್ಯಮಂತ್ರಿಗಳ ಆದೇಶದಂತೆ ನಡೆದು ತಾವು ಈಗಾಗಲೇ ನಿಗದಿಪಡಿಸಿದ್ದ (ಕಾಯ್ದಿರಿಸಿದ) 90 ಹಳ್ಳಿಗಳನ್ನು ಕಾರ್ಖಾನೆಯ ವ್ಯಾಪ್ತಿಯಿಂದ ತೆಗೆದು ಹಾಕುತ್ತಾರೆ. ಅವರ ಕೃತ್ಯವು ಸಿಂಧುವೇ ?



(b) The university cancelled the examination of a centre on account of mass copying. Some innocent students aggrieved by the order challenge the order on the ground that notice and hearing were not given to them before passing the order. Decide.

ಒಂದು ವಿಶ್ವವಿದ್ಯಾಲಯವು ಒಂದು ಪರೀಕ್ಷಾ ಕೇಂದ್ರದ ಪರೀಕ್ಷೆಯನ್ನು ಸಾಮೂಹಿಕ ನಕಲು ನಡೆದಿದ್ದಕ್ಕಾಗಿ ರದ್ದುಪಡಿಸುತ್ತದೆ. ಆ ಆದೇಶದಿಂದ ಕ್ಷತಿಹೊಂದಿದ ಕೆಲ ಮುಗ್ಧ ವಿದ್ಯಾರ್ಥಿಗಳು ತಮಗೆ ಆದೇಶ ಪೂರ್ವದಲ್ಲಿ ನೋಟೀಸು ನೀಡಿಲ್ಲ ಮತ್ತು ಶ್ರವಣದ ಅವಕಾಶ ನೀಡಿಲ್ಲ ಎಂಬ ಕಾರಣಕ್ಕೆ ಆದೇಶವನ್ನು ಪ್ರಶ್ನಿಸುತ್ತಾರೆ. ನಿರ್ಧರಿಸಿರಿ.

(c) In a particular jail the food supplied to the prisoners is unfit for consumption and cells are unfit for habitation. Mr. X, knowing this wants to file a writ on behalf of the prisoners. Advise him.

ಒಂದು ನಿರ್ದಿಷ್ಟ ಜೈಲಿನಲ್ಲಿ ಖೈದಿಗಳಿಗೆ ನೀಡುವ ಆಹಾರವು ತಿನ್ನಲು ಯೋಗ್ಯವಾಗಿಲ್ಲ ಮತ್ತು ಕೋಠಡಿಗಳು ವಾಸಕ್ಕೆ ಯೋಗ್ಯವಾಗಿಲ್ಲ. ಈ ವಿಷಯ ತಿಳಿದಿರುವ 'X' ನು ಖೈದಿಗಳ ಪರವಾಗಿ ಒಂದು ರಿಟ್ ದಾಖಲು ಮಾಡಬಯಸುತ್ತಾನೆ. ಅವನಿಗೆ ಸಲಹೆ ನೀಡಿರಿ.

**II Semester 3 Year LL.B./VI Semester 5 Year B.A.LL.B./B.B.A.LL.B./B.Com. LL.B./B.A.LL.B. (Maj.-Min. System)**
**Examination, March/April 2023 (Dec. 2022)**
**ADMINISTRATIVE LAW**

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**
**2. Q. No. 9 carries 20 marks and the rest carry 16 marks each.**
